ಹಾಗೂ 1997-98ನೇ ಸಾಲಿಗೆ ತೋಟಗಾರಿಕೆ ಬೆಳೆ ಪ್ರದೇಶವು 17.17 ಲಕ್ಷ ಹೆ. ಮತ್ತು ಉತ್ಪಾದನೆ 128.06 ಲಕ್ಷ ಟನ್‌ಗಳಿಗೆ ಅಂದಾಜಿಸಲಾಗಿದೆ.

ರಾಜ್ಯ ಕೃಷಿ ನೀತಿಯಲ್ಲಿ ತಾಳೆ ಬೆಳೆ ಪ್ರದೇಶವನ್ನು 20,000 ಹೆ. ಪ್ರದೇಶದಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿತ್ತು, ಆದರೆ ಈ ಯೋಜನೆಯು ಭಾಗವಹಿಸಿದ್ದ ಕೆಲವು ಕಂಪನಿಗಳು ಹಿಂದಕ್ಕೆ ಸರಿದಿದ್ದರಿಂದ ಈ ಯೋಜನೆಯ ಅಭಿವೃದ್ಧಿಗೆ ಒಟ್ಟಾರೆ ಹಿನ್ನೆಡೆ ಉಂಟಾಗಿರುತ್ತದೆ. ಅದಾಗ್ಯೂ ಈವರೆಗೂ 8000 ಹೆ. ಪ್ರದೇಶದಲ್ಲಿ ತಾಳೆ ಬೆಳೆಯನ್ನು ರೈತರ ಜಮೀನಿನಲ್ಲಿ ತರಲಾಗಿದೆ. ಈಗ ಮತ್ತೆ ಆಸಕ್ತಿ ಇರುವ ಕಂಪನಿಗಳನ್ನು ಗುರುತಿಸಿ ರಾಜ್ಯದ ವಿವಿಧ ನೀರಾವರಿ ಅಚ್ಚು ಕಟ್ಟು ಪ್ರದೇಶದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದ್ದು, ಈ ಕಂಪನಿಗಳು ಕಾರ್ಯೋನ್ಮುಖವಾಗಿದೆ.

ಆ) ಹೊಸ ಕೃಷಿ ನೀತಿ ಘೋಷಣೆಯಾದ ನಂತರ ಒಟ್ಟು130 ಮಂದಿ ಕೃಷಿ ಪದವೀಧರರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.

ಆ) ರಾಜ್ಯದಲ್ಲಿ ಹಾಲಿ 4853 ಕೃಷಿ ಸಹಾಯಕರ ಹುದ್ದೆಗಳಿರುತ್ತದೆ ಅವೆರೆಲ್ಲರೂ ಕೃಷಿ ಪದವೀಧರರಲ್ಲ.

ಇ) ಕೃಷಿ ಪದವೀಧರರನ್ನು ಕಳೆದ ನಾಲ್ಕು ವರ್ಷಗಳಲ್ಲಿ ಕೃಷಿ ಸಹಾಯಕರನ್ನಾಗಿ ನೇಮಕ ಮಾಡಿರುವುದಿಲ್ಲ.

ಗುಳೇದಗುಡ್ಡ ಮತ್ತ ಕ್ಷೇತ್ರದಲ್ಲಿ ಆಶ್ರಯ ಮನೆಗಳು

1773 - ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಳೇದಗುಡ್ಡ ಮತಕ್ಷೇತ್ರದ ಮೂರು ತಾಲ್ಲೂಕಿನ ಭಾಗಗಳಿಗೆ 1998-99ನೇ ಸಾಲಿಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರು ಮಾಡಿದ ಮನೆಗಳ ಸಂಖ್ಯೆ ಎಷ್ಟು?*

ಆ) *ಇದಕ್ಕಾಗಿ ಮಂಜೂರು ಮಾಡಿದ ಅನುದಾನ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) 1998- 99ನೇ ಸಾಲಿಗೆ ಮಂಜೂರಾದ ಮನೆಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

1.	ಬಾಗಲಕೋಟೆ	105
2.	ಬಾದಾಮಿ	140
3.	ಹುನಗುಂದ	141

ಅ) ತಾಲ್ಲೂಕುವಾರು ಅನುದಾನ ವಿವರ

1. ಬಾಗಲಕೋಟೆ 7.60 ಲಕ್ಷ
2. ಬಾದಾಮಿ 2.50 ಲಕ್ಷ
3. ಹುನಗುಂದ -

ಮೈಸೂರು ನಗರದಲ್ಲಿರುವ ಕೊಳಚೆ ಪ್ರದೇಶಗಳು

1774 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಈಗಿರುವ ಕೊಳಚೆ ಪ್ರದೇಶಗಳು ಯಾವುವು?

ಆ) ಕಳೆದ ನಾಲ್ಕು ವರ್ಷಗಳಲ್ಲಿ ಯಾವ ಯಾವ ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡಲಾಗಿದೆ? (ವಿವರ ಒದಗಿಸುವುದು)

ಇ) ಈಗಿರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ಯಾವ ಯಾವ ಕ್ರಮ ಕೈಗೊಂಡಿದ್ದಾರೆ? (ವಿವರವಾಗಿ ತಿಳಿಸುವುದು)

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಅನುಬಂಧದಲ್ಲಿ ನೀಡಲಾಗಿದೆ.

ಆ) ಕಳೆದ ನಾಲ್ಕು ವರ್ಷಗಳಲ್ಲಿ ಮೈಸೂರು ನಗರ ವ್ಯಾಪ್ತಿಯ ಇಂದಿರಾ ಕಾಲೋನಿ ಮತ್ತು ಸಹಕಾರ ಭವನದ ಹಿಂಭಾಗದ ಕೊಳಚೆ ಪ್ರದೇಶಗಳಲ್ಲಿನ ನಿವಾಸಿಗಳನ್ನು ಕ್ಯಾತಮಾರನಹಳ್ಳಿ ಬಡಾವಣೆಗೆ ಸ್ಥಳಾಂತರಿಸಿ ನಿರ್ಮೂಲನೆ ಮಾಡಲಾಗಿದೆ.

ಇ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	1999-2000ನೇ ಸಾಲಿಗೆ ನಿಗಧಿಪಡಿಸಿರುವ ಹಣ
1.	ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು	21.00
2.	ವಸತಿ ಯೋಜನೆಯಡಿ ಮನೆ ನಿರ್ಮಾಣ	43.80
3.	ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅನುದಾನದಿಂದ ಕೊಳಚೆ ಪ್ರದೇಶ ಉನ್ನತೀಕರಣ	300.00